# ವ್ಯಾಪ್ಥ ಸಂಧಿ

ಹರಿಕಥಾಮ್ರಿತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು.

ಪುರುಷರೂಪತ್ರಯ ಪುರಾತನ
ಪುರುಷ ಪುರುಷೋತ್ತಮ್ಮ ಅರಾಅರ
ಪುರುಷ ಪುಜಿತಪಾದ ಪುಣಾನಂದ ಜ್~ನ್ಯಾನಮಯ
ಪುರುಷಸೂಕ್ತ ಸುಮೇಯ ತತ್ತತ್
ಪುರುಷ ಹ್ಇತ್ಪುಷ್ಕರನಿಲಯ ಮಹ
ಪುರುಷಜಾಂಡಾಂತರದಿ ಬಹಿರದಿವ್ಯಾಪ್ತ ನಿಲಿಪ್ತ ೩-೧

ಸ್ತ್ರೀನಪುಂಸಕ ಪುರುಷ ಭೂಸಲಿ
ಲಾನಲಾನಿಲ ಗಗನಮನ ಶಶಿ
ಭಾನು ಕಾಲಗುಣ ಪ್ರಕ್ಇತಿಯೊಳಗೊಂದು ತಾನಲ್ಲ
ಏನು ಇವನ ಮಹಾಮಹಿಮೆ ಕಡೆ
ಗಾಣರಜಭವ ಶಕ್ರಮುಖರು ನಿ
ಧಾನಿಸಲು ಮಾನವರಿಗಳವಡುವುದೇ ವಿಚಾರಿಸಲು ೩-೨

ಗಂಧ ರಸ ರೂಪ ಸ್ಪರಶ ಶ
ಬ್ದೊಂದು ತಾನಲ್ಲದರದರ ಪೆಸ
ರಿಂದ ಕರೆಸುತ ಜೀವರಿಗೆ ತಪಕನು ತಾನಾಗಿ
ಪೊಂದಿಕೊಂಡಿಹ ಪರಮಕರುಣಾ
ಸಿಂಧು ಶಾಶ್ವತ ಮನವೆ ಮೊದಲಾ
ದಿಂದ್ರಿಯ ಗಳೋಳಗಿದ್ದು ಭೋಗಿಸುತಿಹನು ವಿಷಯಗಳ ೩-೩

ಶ್ರವಣ ನಯನ ಘ್ರಾಣ ತ್ವಗ್ರಸ
ನಿವುಗಳಲಿ ವಾಕ್ ಪಾಣಿಪಾದಾ
ದ್ಯವಯವಗಳಳಿ ತದ್ಗುಣಗಳಳಿ ತತ್ಪತಿಗಳೊಳಗೆ
ಪ್ರವಿತತನು ತಾನಾಗಿ ಕ್ಇತಿಪತಿ
ವಿವಿಧಕಮವ ಮಾಡಿ ಮಾಡಿಸಿ
ಭವಕೆ ಕಾರಣನಾಗಿ ತಿರುಗಿಸುತಿಹನು ತಿಳಿಸದಲೆ ೩-೪

ಗುಣಿಗುಣಗಳೊಳಗಿದ್ದು ಗುಣಿಗುಣ
ನೆನಿಸುವನು ಗುಣಬದ್ಧನಾಗದೆ
ಗುಣಜ ಪುಣ್ಯಾಪುಣ್ಯಫಲ ಭೃಹ್ಮಾದಿ ಚೇತನಕೆ
ಉಣಿಸುತವರೊಳಗಿದ್ದು ವೃಜಿನಾ
ದನ ಚಿದಾನಂದೈಕ ದೇಹನು
ಕೊನೆಗೆ ಸಚರಾಚರ ಜಗದ್ಭುಕುವೆನಿಪನವ್ಯಯನು ೩-೫

ವಿದ್ಯೆ ತಾನೆಂದೆನಿಸಿಕೊಂಬನಿ
ರುದ್ಧ ದೇವನು ಸವಜೀವರ
ಬುದ್ಧಿಯೋಳ್ ನೆಲೆಸಿದ್ದು ಕ್ಇತಿಪತಿ  ಬುದ್ಧಿಯೆನಿಸುವನು
ಸಿದ್ಧಿ ಯೆನಿಸುವ ಸಂಕರುಷಣ ಪ್ರ
ಸಿದ್ಧ ನಾಮಕ ವಾಸುದೇವನ
ವದ್ಯರೂಪ ಚತುಷ್ಟಯಗಳರಿತವನೇ ಪಂದಿತನು ೩-೬

ತನುಚತುಷ್ಟಯಗಳೊಳು ನಾರಾ
ಯಣನು ಹ್ಇತ್ಕಮಲಾಖ್ಯ ಸಿಂಹಾ
ಸನದೊಳನಿರುದ್ಧಾದಿ ರೂಪಗಳಿಂದ ಶೋಭಿಸುತ
ತನಗೆ ತಾನೇ ಸೇವ್ಯ ಸೇವಕ
ನೆನಿಸಿ ಸೇವಾಸಕ್ತ ಸುರರೊಳ
ಗನವರತ ನೆಲೆಸಿದ್ದು ಸೇವೆಯ ಕೈಕೊಂಬನವರಂತೆ ೩-೭

ಜಾಗರ ಸ್ವಪ್ನಂಗಳೊಳು ವರ
ಭೋಗಿಶಯನ ಬಹುಪ್ರಕಾರ ವಿ
ಭಾಗಗೈಸಿ ನಿರಂಶ ಜೀವರ ಚೆಟ್ಟರೀರವನು
ಭೋಗವಿತ್ತು ಸುಶುಪ್ತಿಕಾಲದಿ
ಸಾಗರವ ನದಿ ಕೂಡುವಂತೆ ವಿ

ಯೋಗ ರಹಿತನು ಅಂಶಗಳನೇಕತ್ರವ್ಯೈದಿಸುವ ೩-೮

ಭಾಯರಿಂದೊಡಗೂಡಿ ಕಾರಣ
ಕಾಯವಸ್ತುಗಳಲ್ಲಿ ಪ್ರೇರಕ
ಪ್ರೇಯರೂಪಗಳಿಂದ ಪಟತಂತುಗಳವೋಲಿದ್ದು
ಸೂಯಕಿರಣಗಳಂತೆ ತನ್ನಯ
ವೀಯದಿಂದಲಿ ಕೊಡುತ ಕೊಳುತಿಹ
ನಾಯರಿಗೆ ಈತನ ವಿಹಾರವು ಗೋಚರಿಪುದೇನೊ ೩-೯

ಜನಕ ತನ್ನಾತ್ಮಜಗೆ ವರ ಭೂ
ಷಣ ದುಕೂಲವ ತೊಡಿಸಿ ತಾ ವಂ
ದನೆಯ ಕೈಕೊಳುತವನ ಹರಸುತ ಹರುಷ ಬಡುವಂತೆ
ವನರುಹೇಅಣ ಪೂಜ್ಯ ಪೂಜಕ
ನೆನಿಸಿ ಪೂಜಾಸಾಧನ ಪದಾ
ಥನು ತನಗೆ ತಾನಾಗಿ ಫಲಗಳನೀವ ಭಜಕರಿಗೆ ೩-೧೦

ತಂದೆ ಬಹುಸಂಭ್ರಮದಿ ತನ್ನಯ
ಬಂಧುಬಳಗವ ನೆರಹಿ ಮದುವೆಯ
ನಂದನಗೆ ತಾ ಮಾಡಿ ಮನೆಯೊಳಗಿಡುವ ತೆರನಂತೆ
ಇಂದಿರಾಧವ ತನ್ನ ಇಚ್ಛೆಗ

www.yousigma.com

ಳಿಂದೆ ಗುಣಗಳ ಚೇತನಕೆ ಸಂ
ಬಂಧಗೈಸಿ ಸುಖಾಸುಖಾತ್ಮಕ ಸಂಸ್ಕ್ಇತಿಯೊಳಿಡುವ ೩-೧೧

ತ್ಇಣಕ್ಇತಾಲಯದೊಳಗೆ ಪೊಗೆ ಸಂ
ದಣಿಸಿ ಪ್ರತಿಛಿದ್ರದಲಿ ಪೊರಮ
ಟ್ಟನಲನಿರವನು ತೋರಿತೋರದಲಿಪ್ಪ ತೆರನಂತೆ
ವನಜಜಾಂಡದೊಳಖಿಳ ಜೀವರ
ತನುವಿನೊಳ ಹೊರಗಿದ್ದುಕಾಣೀಸ
ದನಿಮಿಷೇಶನು ಸಕಲ ಕಮವ ಮಾಳ್ಪನವರಂತೆ ೩-೧೨

ಪಾದಪಗಳಡಿಗೆರೆಯೆ ಸಲಿಲವು
ತೋದು ಕೊಂಬೆಗಳುಬ್ಬಿ ಪುಷ್ಪ
ಸ್ವಾದು ಫಲವೀವಂದದಲಿ ಸವೇಶ್ವರನು ಜನರಾ
ರಾಧನೆಯ ಕೈಕೊಂಡು ಬ್ರಹ್ಮ ಭ
ವಾದಿಗಳ ನಾಮದಲಿ ಫಲವಿ
ತ್ತಾದರಿಸುವನು ತನ್ನ ಮಹಿಮೆಯ ತೋರಗೊಡ ಜಗಕೆ ೩-೧೩

ಶ್ಇತಿತತಿಗಳಿಗೆ ಗೋಚರಿಸಿದ
ಪ್ರತಿಮಜಾನಂದಾತ್ಮನಚ್ಯುತ
ವಿತತ ವಿಶ್ವಾಧಾರ ವಿದ್ಯಾಧೀಶ ವಿಧಿಜನಕ

ಪ್ರತಿದಿವಸ ಚೇತನರೊಳಗೆ ಪ್ರ
ಕ್ಇತ ಪುರುಷನಂದದಲಿ ಸಂಚರಿ
ಸುತ ನಿಯಮ್ಯ ನಿಯಾಮಕನು ತಾನಾಗಿ ಸಂತೃಪ ೩-೧೪

ಮನ ವಿಷಯದೊಳಗಿರಿಸಿ ವಿಷಯವ
ಮನದೊಳಗೆ ನೆಲೆಗೊಳಿಸಿ ಬಲು ನೂ
ತನವು ಸುಸಮೀಚೀನವಿದುಪಾದೇಯವೆಂದರುಪಿ
ಕನಸಿಲಾದರು ತನ್ನ ಪಾದವ
ನೆನವನೀಯದೆ ಸವರೊಳಗಿ
ದ್ದನುಭವಿಸುವನು ಸ್ಥೂಲವಿಷಯವ ವಿಶ್ವನೆಂದೆನಿಸಿ ೩-೧೫

ತೋದಕನು ತಾನಾಗಿ ಮನ ಮೊದ
ಲಾದ ಕರಣದೊಳಿದ್ದು ವಿಷಯವ
ನೈದುವನು ನಿಜಪೂಣಸುಖಮಯ ಗ್ರಾಃಯಗ್ರಾಹಕನು
ವೇದವೇದ್ಯನು ತಿಳಿಯದವನೋ
ಪಾದಿ ಭುಂಜಿಸುತೆಲ್ಲರೊಳಗಾ
ಹ್ಲಾದ ಪಡುವನು ಭಕ್ತವತ್ಸಲ ಭಾಗ್ಯಸಂಪನ್ನ ೩-೧೬

ನಿತ್ಯನಿಗಮಾತೀತ ನಿಗುಣ
ಭಕ್ತವತ್ಸಲ ಭಯವಿನಾಶನ

ಸತ್ಯಕಾಮ ಶರಣ್ಯ ಶ್ಯಾಮಲ ಕೋಮಲಾಂಗ ಸುಖೀ
ಮತ್ತನಂದದಿ ಮತ್ಯರೊಳಹೊರ
ಗೆತ್ತನೋಡಲು ಸುತ್ತಲಿಪ್ಪನು
ಅತ್ಯಧಿಕ ಸಂತ್ಇಪ್ತ ತ್ರಿಜಗದ್ವ್ಯಾಪ್ತ ಪರಮಾಪ್ತ ೩-೧೭

ಪವಿ ಹರಿನ್ಮಣಿ ವಿದ್ರುಮದ ಸ
ಚ್ಛವಿಗಳಂದದಿ ರಾಜಿಸುತ ಮಾ
ಧವ ನಿರಂತರ ದೇವಮಾನವ ದಾನವರೊಳಿದ್ದು
ತ್ರಿವಿಧ ಗುಣಕಮ ಸ್ವಭಾವ
ಪವನಮುಖ ದೇವಾಂತರಾತ್ಮಕ
ದಿವಸದಿವಸದಿ ವ್ಯಕ್ತಮಾಡುತಲವರೊಳಿದ್ದುಣಿಪ ೩-೧೮

ಅಣುಮಹತ್ತಿನೊಳಿಪ್ಪ ಘನ ಪರ
ಮಾಣುವಿನೊಳಗಡಗಿಸುವ ಸೂಕ್ಷ್ಮವ
ಮುಣುಗಿಸುವ ತೇಲಿಸುವ ಸ್ಥೂಲಗಳವನ ಮಾಯವಿದು
ದನುಜರಕ್ಕಸಲೆಲ್ಲರಿವನೊಳು
ಮುನಿದು ಮಾಡುವುದೇನುಲೂಖಲ
ಒನಕೆಗಳು ಧಾನ್ಯಗಳ ಹಣಿವಂದದಲಿ ಸಂಹರಿಪ ೩-೧೯

ದೇವ ಮಾನವ ದಾನವರು ಎಂ

ದೀ ವಿಧದಲಾವಗಲಿಪ್ಪರು
ಮೂವರೊಳಗಿವಗಿಲ್ಲ ಸ್ನೇಹೋದಾಸೀನ ದ್ವೇಷ
ಜೀವರಧಿಕಾರಾನುಸಾರದ
ಲೀವ ಸುಖ ಸಂಸಾರ ದುಃಖವ
ತಾ ಉಣದೊಲವರವರಿಗುಣಿಸುತ ನಿಗತಾಶನನು ೩-೧೦

ಎಲ್ಲಿ ಕೇಳಿದರೆಲ್ಲಿ ನೋಡಿದ
ರೆಲ್ಲಿ ಬೇಡಿದರೆಲ್ಲಿ ನೀಡಿದ
ರೆಲ್ಲಿ ಓಡಿದರೆಲ್ಲಿ ಆಡಿದರೆಲ್ಲಿ ಇರುತಿಹನು
ಬಲ್ಲಿದರಿಗತಿಬಲ್ಲಿದನು ಸರಿ
ಇಲ್ಲ ಇವಗಾವಲ್ಲಿ ನೋಡಲು
ಖುಲ್ಲ ಮಾನವರೊಲ್ಲನಪ್ರತಿಮಲ್ಲ ಜಗಕೆಲ್ಲ ೩-೧೯

ತಪ್ತ ಲೋಹವು ನೋಳ್ಪ ಜನರಿಗೆ
ಸಪ್ತಜಿಹ್ವನ ತೆರದಿ ತೋಪುದು
ಲುಪ್ತಪಾವಕ ಲೋಹಕಾಂಬುದು ಪುವದೋಪಾದಿ
ಸಪ್ತವಾಹನ ನಿಖಿಳಜನರೊಳು
ವ್ಯಾಪ್ತನಾದುದರಿಂದ ಸವರು
ಆಪ್ತರಾಗಿಹರೆಲ್ಲ ಕಾಲದಿ ಹಿತವ ಕೈಕೊಂಡು ೩-೧೧

www.yousigma.com

ವಾರಿದನು ಮಳೆಗರಿಯೆ ಬೆಳೆದಿಹ
ಭೂರುಹಂಗಳ ಚಿತ್ರಫಲರಸ
ಬೇರೆ ಬೇರಿಪ್ಪಂತೆ ಬಹುವಿಧ ಜೀವರೊಳಗಿದ್ದು
ಮಾರಮಣನವರವರ ಯೋಗ್ಯತೆ
ಮೀರದಲೆ ಗುಣಕರ್ಮಗಳನು
ಸಾರ ನಡೆಸುವ ದೇವನಿಗೆ ವೈಷಮ್ಯವೆಲ್ಲಿಹುದೋ ೩-೧೩

ವಾರಿಜಾಪ್ತನ ಕಿರಣಮಣಿಗಳ
ಸೇರಿ ತತ್ತದ್ವಣಗಳನು ವಿ
ಕಾರಗೈಸದೆ ನೋಳ್ಪರಿಗೆ ಕಂಗೊಳಿಸುವಂದದಲಿ
ಮಾರಮಣ ಲೋಕತ್ರಯದೊಳಿಹ
ಮೂರುವಿಧ ಜೀವರೊಳಗಿದ್ದು ವಿ
ಹಾರಮಾಡುವನವರ ಯೋಗ್ಯತೆ ಕರ್ಮವನುಸರಿಸಿ ೩-೧೪

ಜಲವನಪಹರಿಸುವ ಘಳಿಗೆ ಬ
ಟ್ಟಲನುಳಿದು ಜೈಘಂತೆ ಕೈಪಿಡಿ
ದೆಳೆದು ಹೊಡೆವಂದದಲಿ ಸಂತತ ಕರ್ತ್ಇ ತಾನಾಗಿ
ಹಲಧರಾನುಜ ಪುಣ್ಯಪಾಪದ
ಫಲಗಳನು ದೇವಾಸುರರ ಗಣ
ದೊಳು ವಿಭಾಗವಮಾಡಿ ಉಣಿಸುತ ಸಾಕ್ಷಿಯಾಗಿಪ್ಪ ೩-೧೫

ಪೊಂದಿಕೊಂಡಿಹ ಸವರೊಳು ಸಂ
ಬಂಧವಾಗದೆ ಸಕಲಕಮವ
ರಂದದಲಿ ತಾ ಮಾಡಿ ಮಾಡಿಸಿ ತತ್ಫಲಗಳುಣದೆ
ಕುಂದಿದಣು ಮಹತ್ತೆನಿಪ ಘಟ
ಮಂದಿರದಿ ಸವತ್ರ ತುಂಬಿಹ
ಬಾಂದಳದ ತೆರನಂತೆ ಇರುತಿಪ್ಪನು ರಮಾರಮಣ ೩-೧೬

ಕಾದಕಬ್ಬಿಣ ಹಿಡಿದು ಬಡಿಯಲು
ವೇದನೆಯು ಲೋಹಗಳಿಗಲ್ಲದೆ
ಆದುದೇನ್ಯೆ ಅನಳಗಾ ವ್ಯಥೆ ಏನು ಮಾಡಿದರು
ಆದಿದೇವನು ಸವಜೀವರ
ಕಾದುಕೊಂಡಿಹನೊಳಹೊರಗೆ ದುಃ
ಖಾದಿಗಳು ಸಂಬಂಧವಾಗುವದೇನೊ ಚಿನ್ಮಯಗೆ ೩-೧೭

ಮಳಲಮನೆಗಳ ಮಾಡಿ ಮಕ್ಕಳು
ಕೆಲವು ಕಾಲದಲಾಡಿ ಮೋದದಿ
ತುಳಿದು ಕೆಡಿಸುವ ತೆರದಿ ಲಕುಮೀರಮಣ ಲೋಕಗಳ
ಹಲವು ಬಗೆಯಲಿ ನಿಮಿಸುವ ನಿ
ಶ್ಚಲನು ತಾನಾಗಿದ್ದು ಸಲಹುವ

ಎಲರುಣಿಯವೋಲ್ ನುಂಗುವಗೆ ಎಲ್ಲಿಹುದೋಸುಖದುಃಖ ೩-೧೮

ವೇಷ ಭಾಷೆಗಳಿಂದ ಜನರ ಪ್ರ
ಮೋಷಗೈಸುವ ನಟಪುರುಷನೋಲ್
ದೋಷದೂರನು ಲೋಕದೊಳು ಬಹುರೂಪಮಾತಿನಲಿ
ಪೋಷಿಸುವನವರವರ ಮನದಭಿ
ಲಾಷೆಗಳ ಪೂರೈಸುತನುದಿನ
ಪೋಷಿಸುವ ಪೂತಾತ್ಮ ಪೂಣಾನಂದ ಜ್~ನ್ಯಾನಮಯ ೩-೧೯

ಅಧಮ ಮಾನವನೋವ ಮಂತ್ರೌ
ಷಧಗಳನು ತಾನರಿತು ಪಾವಕ
ಉದಕಗಳ ಸಂಬಂಧವಿಲ್ಲದೆ ಇಪ್ಪನದರೊಳಗೆ
ಪದುಮಜಾಂಡೋದರನು ಸವರ
ಹ್ಇದಯದೊಳಗಿರೆ ಕಾಲಗುಣ
ಕಮದ ಕಲುಷ ಸಂಬಂಧವಾಗುವುಧೇ ನಿರಂಜನಗೆ ೩-೨೦

ಒಂದು ಗುಣದೊಳಗನಂತ ಗುಣಗಳು
ಒಂದು ರೂಪದೊಳಿಹವು ಲೋಕಗ
ಳೊಂದು ರೂಪದಿ ಧರಿಸಿ ತದ್ಗತ ಪಧಾಥದೊಳಹೊರಗೆ
ಬಾಂದಳದವೋಲಿದ್ದು ಬಹು ಪೆಸ

ರಿಂದ ಕರೆಸುತ ಪೂಣಜ್~ನ್ಯಾನಾ
ನಂದಮಯ ಪರಿಪರಿ ವಿಹಾರವ ಮಾಡಿ ಮಾಡಿಸುವ ೩-೩೧

ಎಲ್ಲರೊಳು ತಾನಿಪ್ಪ ತನ್ನೊಳ
ಗೆಲ್ಲರನು ಧರಿಸಿಹನು ಅಪ್ರತಿ
ಮಲ್ಲ ಮನ್ಮಥ ಜನಕ ಜಗದಾದ್ಯಂತ ಮಧ್ಯಗಳ
ಬಲ್ಲ ಬಹುಗುಣಭರಿತ ದಾನವ
ದಲ್ಲಣ ಜಗನ್ನಾಥವಿಠಲ್ಲ
ಸೊಲ್ಲಲಾಲಿಸಿ ಸ್ತಂಭದಿಂದಲಿ ಬಂದ
ಭಕುತನಿಗೆ ೩-೩೨